(ii) Pucca Middle Schools—Nil.

(c) A New Type Middle School has been sanctioned to the place this year.

(d) Yes; and the need is met this year.

**Sri Mulka GOVINDA REDDY.**—I have no supplementaries to ask.

---

## Local Fund Dispensary for Didaga in Channarayapatna Taluk.

Q.—9. **Sri K. LAKKAPPA** (Channarayapatna).—

Will the Government be pleased to state:—

(a) whether they are aware that there was an interpellation during the last session for the sanction of a Local Fund Dispensary for Didaga in Channarayapatna Taluk;

(b) whether they have taken steps to sanction the same?

A.—**Sri T. CHANNIAH** (Minister for Public Health and Local Self-Government).—

(a) Yes.

(b) The question is under consideration.

ಶ್ರೀ ಕೆ. ಲಕ್ಕಪ್ಪ.—ದಿಡಿಗ ಗ್ರಾಮದಲ್ಲಿ ಕಟ್ಟಡ ಕಟ್ಟಿ ಮುಗಿದು ಆಗಲೇ ಒಂದು ವರ್ಷವಾಗಲಿದೆಯೆಂಬುದು ತಮ್ಮ ಗಮನಕ್ಕೆ ಬಂದಿದೆಯೆ?

*ಶ್ರೀ ಟಿ. ಚೆನ್ನಯ್ಯ.—ಗೊತ್ತಿದೆ.

ಶ್ರೀ ಕೆ. ಲಕ್ಕಪ್ಪ.—ಇದನ್ನು ಕೂಡಲೆ ಮಂಜೂರು ಮಾಡಿಕೊಡಬೇಕೆಂದು ಪದೇಪದೇ ತಮಗೆ ಮನವಿಗಳು ಬಂದಿವೆಯೇ?

ಶ್ರೀ ಟಿ. ಚನ್ನಯ್ಯ.—ಹೌದು.

ಶ್ರೀ ಕೆ. ಲಕ್ಕಪ್ಪ.—ಹಿಂದಿನ ಸಾರಿ ಅಧಿವೇಶನದಲ್ಲಿ ಈ ಬಗ್ಗೆ ಪ್ರಶ್ನೆ ಕೇಳಿದ್ದಕ್ಕೆ ಈ ಕೂಡಲೆ ಮಂಜೂರು ಮಾಡುತ್ತೇವೆಂದು ಹೇಳಿರಲಿಲ್ಲವೇ?

ಶ್ರೀ ಟಿ. ಚನ್ನಯ್ಯ.—ಉತ್ತರ ಕೊಟ್ಟಿದೆ.

ಶ್ರೀ ಕೆ. ಲಕ್ಕಪ್ಪ.—ಹಾಗಾದರೆ ಇದುವರೆಗೂ ಏಕೆ ಮಾಡಲಿಲ್ಲ?

ಶ್ರೀ ಟಿ. ಚನ್ನಯ್ಯ.—ಹಾಸನ ಡಿಸ್ಟ್ರಿಕ್ಟ್ ಬೋರ್ಡಿನವರು initial ಖರ್ಚುವೆಚ್ಚಗಳ ಮತ್ತು ಆವರ್ತ ವೆಚ್ಚಗಳ ಬಗ್ಗೆ ಇನ್ನೂ ಹೆಚ್ಚಿಗೆ ವಹಿಸುವ ವಿಚಾರದಲ್ಲಿ ನಿರ್ಣಯಮಾಡಿ ಕಳುಹಿಸಿಕೊಟ್ಟಿಲ್ಲ. ಆದ್ದರಿಂದ ತಡವಾಗಿದೆ.

ಶ್ರೀ ಕೆ. ಲಕ್ಕಪ್ಪ.—ಡಿಸ್ಟ್ರಿಕ್ಟ್ ಬೋರ್ಡಿನವರು ಅರ್ಧ ಕೊಡುತ್ತೇವೆಂದು ಒಪ್ಪಿಕೊಂಡಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಟಿ. ಚನ್ನಯ್ಯ.—1/3 ಭಾಗದಷ್ಟು ಕೊಡುತ್ತೇವೆಂದು ಹೇಳಿದ್ದಾರೆ: ನಾವು ಪೂರ್ತಿ ಕೋಟಾ ಕೊಡಬೇಕೆಂದು ಹೇಳಿದ್ದೇವೆ. ಅದು ಬಂದ ತಕ್ಷಣ ದಿಡಿಗಕ್ಕೆ ಕೊಡುತ್ತೇವೆ.

ಶ್ರೀ ಕೆ. ಲಕ್ಕಪ್ಪ.—ಡಿಸ್ಟ್ರಿಕ್ಟ್ ಬೋರ್ಡಿನವರಿಗೆ ನಿಬಂಧನೆಗಳ ಪ್ರಕಾರ 1/3 ಭಾಗದಷ್ಟು ಮಾತ್ರ ಕೊಡುವ ಅಧಿಕಾರವಿರುವುದಲ್ಲವೇ?

ಶ್ರೀ ಟಿ. ಚನ್ನಯ್ಯ.—ಡಿಸ್ಟ್ರಿಕ್ಟ್ ಬೋರ್ಡಿನವರೇ ತಮ್ಮ ಭಾಗದ ಪೂರ್ತಿ ಹಣವನ್ನು initial ಮತ್ತು recurring ಖರ್ಚುಗಳಿಗಾಗಿ ಕೊಡಬೇಕು.

---

## Sri Jayachamarajendra Institute of Indian Medicine in Bangalore.

Q.—**Sri P. R. RAMAIYA** (Basavangudi).—

Will the Government be pleased to state:—

(a) the total amount of donations received from the public for the construction and other purposes of the Sri Jayachamarajendra Institute of Indian Medicine in Bangalore;

(b) how much the Government have spent for the building and other equipments;

(c) whether it has come to their notice that there are not enough beds and other facilities in it to cope with the in-rush of in-patients and out-patients;

(d) the name of the present Medical Officer of this Institute;

(e) whether he has made any representations to the Government for the improvement of this Institute;

(f) what his recommendations are;

(g) what action they have taken on them?

A.—**Sri T. CHANNIAH** (Minister for Public Health and Local Self-Government).—

(a) Rs. 3,57,024.

(b) 6 lakhs.

(c) Yes. The matter is under the active consideration of Government.

(d) Dr. Y. Parthanarayana Pandit.

(e) to (g) No.

9—30 A.M.

ಶ್ರೀ ಪಿ. ಆರ್. ರಾಮಯ್ಯ.—("C") ಪ್ರಶ್ನೆಗೆ ಉತ್ತರವಾಗಿ 'the matter is under the active consideration of the government' ಎಂದು ಹೇಳಿದ್ದೀರಿ. ಈಗಾಗಲೇ ನೂರಾರು ಜನ ಅಲ್ಲಿ ಚಿಕಿತ್ಸೆಗಾಗಿ ಬಂದು ಅನುಕೂಲವಿಲ್ಲದೆ ವಾಪಸ್ ಹೋಗುತ್ತಾ ಇರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಟಿ. ಚನ್ನಯ್ಯ.—ಇಲ್ಲ.